ಎನ್. ಜಗನ್ನಾಥ ಪ್ರಕಾಶ್

# ವಿಶಿಷ್ಟ ಖಳ ಎಚ್.ಟಿ. ಅರಸ್

ಸ್ವಂತ ಆಸಕ್ತಿ ಇಲ್ಲದಿದ್ದರೂ ತಂದೆಯ ಒತ್ತಾಯಕ್ಕೆ ರಂಗಭೂಮಿಗೆ ಕಾಲಿಟ್ಟು ಅಪ್ರತಿಮ ಕಲಾವಿದರೆನ್ನಿಸಿಕೊಂಡು ಖಳನಾಯಕನ ಪಾತ್ರಕ್ಕೊಂದು ವರ್ಚಸ್ಸು ತಂದುಕೊಟ್ಟವರು ಎಚ್.ಟಿ. ಅರಸ್ (ಹನುಮ ಸಾಗರ ತಿಪ್ಪಣ್ಣ).

ಯಮುನಯ್ಯ, ನಾಗಮ್ಮನವರ ಮಗನಾಗಿ ಕುಷ್ಟಗಿ ತಾಲ್ಲೂಕಿನ ಹನುಮ ಸಾಗರದಲ್ಲಿ ಹುಟ್ಟಿದ ಅರಸ್‌ಗೆ (ತಿಪ್ಪಣ್ಣ) ಶಾಲೆಗೆ ಹೋಗುವಾಗ ನಾಟಕಗಳ ಬಗೆಗೆ ಯಾವುದೇ ಆಸಕ್ತಿ ಇರಲಿಲ್ಲ. ಹೊಳಪು ಕಣ್ಣುಗಳ, ಸದೃಢ ಮೈಮಾಟ ಹೊಂದಿದ್ದ ಮಗನ ಕೈಯಲ್ಲಿ ಪಾತ್ರ ಮಾಡಿಸಬೇಕೆಂಬ ಆಸೆ ಅರಸ್ ಅವರ ತಂದೆಯದು. ಅಪ್ಪನ ಮಾತಿಗೆ ಮೊದಲು ಮಗ ಸೊಪ್ಪು ಹಾಕಲಿಲ್ಲ. ಮಗನಿಗೆ ಇಷ್ಟವಿಲ್ಲದಿದ್ದರೂ ತಂದೆ ಹಿಡಿದ ಪಟ್ಟು ಬಿಡಲಿಲ್ಲ. ಕೊನೆಗೊಂದು ದಿನ ಬಲವಂತದಿಂದ ನಾಟಕದ ತಾಲೀಮು ನಡೆಯುತ್ತಿದ್ದ ಕಡೆಗೆ ಮಗನನ್ನು ಕರೆದೊಯ್ದರು. ನಾಟಕ ಹೇಳಿಕೊಡುತ್ತಿದ್ದ ಮೇಷ್ಟ್ರ ಬಳಿ ಮಗನಿಗೊಂದು ಪಾತ್ರ ಹಾಕಿಸಬೇಕೆಂದು ದುಂಬಾಲು ಬಿದ್ದರು.

ತಾಲೀಮಿನಲ್ಲೂ ಈತ ಸಂಭಾಷಣೆ ಸರಿಯಾಗಿ ಹೇಳುತ್ತಿರಲಿಲ್ಲ. ಪ್ರಯತ್ನವನ್ನೇ ಮಾಡದ ಅರಸ್‌ಗೆ ಮೇಷ್ಟ್ರು ಬಾರಿಸಿಯೇಬಿಟ್ಟರು. ಇದರ ಪರಿಣಾಮ ಹುಡುಗ ತಾಲೀಮಿಗೆ ಚಕ್ಕರ್ ಹಾಕಿಬಿಟ್ಟ. ಈಗ ಪರಿಸ್ಥಿತಿ ತದ್ವಿರುದ್ಧವಾಯಿತು. ತಂದೆ ಬದಲಿಗೆ ಮೇಷ್ಟ್ರು ಅರಸ್ ಬೆನ್ನುಬಿದ್ದರು. ತಾಲೀಮಿನ ಮನೆಗೆ ಕರೆತಂದರು. ಸಂಭಾಷಣೆ – ಹಾಡು ಉರು ಹೊಡೆಸಿ ರಂಗ ಮಂಚದ ಮೇಲೆ ಹತ್ತಿಸಿಯೇ ಬಿಟ್ಟರು.

ಆಗ ಪ್ರದರ್ಶನಗೊಂಡ ನಾಟಕ 'ಅಭಿಮನ್ಯು'. ಇದರಲ್ಲಿ ಅಭಿಮನ್ಯು ಪಾತ್ರ ವಹಿಸಿದ್ದ ಅರಸ್ ಬಗ್ಗೆ ಮೆಚ್ಚುಗೆಯ ಮಾತು ಕೇಳಿಬಂತು. ಹಾಗೆಯೇ ರಂಗಭೂಮಿ ಸಹವಾಸಕ್ಕೆ ಬಿದ್ದರು. ಓದು ಬರಹ, ಭೂಮಿ ಕಸುಬು ಎಲ್ಲಾ ಮರೆತ ಅರಸ್ ನಾಟಕದವರ ಒಡನಾಟದಲ್ಲಿ ಮುಳುಗಿ ಹೋದರು.

ನಾಟಕಕ್ಕೆ ಸೇರು ಎಂದು ಹೊಡೆದಿದ್ದ ತಂದೆ ಈಗ ನಾಟಕವನ್ನು ಬಿಡು ಎನ್ನುತ್ತ ಮಗನನ್ನು ದಂಡಿಸಿದರು. ಪ್ರಯೋಜನವಾಗಲಿಲ್ಲ. ಮದುವೆ ಮಾಡಿದರೂ ನಾಟಕದ ಹುಚ್ಚು ಬಿಡಲಿಲ್ಲ. ಅವಿಭಕ್ತ ಕುಟುಂಬ ತೊರೆದು ಬೇರೆಯಾಗಲೂ ಅರಸರು ಹಿಂದೆ ಮುಂದೆ ನೋಡಲಿಲ್ಲ.

ಕೊನೆಗೊಂದು ದಿನ ಕಂದಗಲ್ ಹನುಮಂತರಾಯರ ಕಂಪೆನಿಗೆ ಸೇರಿಕೊಂಡ ಅರಸರು ಮಾಲೀಕರ ಅವಕೃಪೆಯಿಂದ ನಾಟಕ ಸಂಸ್ಥೆ ಬಿಡಬೇಕಾಯಿತು. ಆದರೆ, ಸಹನಟರಿಗೆ ಅರಸ್ ತಮ್ಮ ಸಂಗಡ ಇರಬೇಕೆಂಬ ಇಚ್ಛೆ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ರಂಗಭೂಮಿ ಬಗೆಗೆ ಅವರಿಗಿದ್ದ ಉತ್ಸಾಹ. ಕಂದಗಲ್ಲರು ಕಂಪೆನಿ ಮಂದಿ ಮಾತಿಗೆ ಮಣಿದು ಮತ್ತೆ ಅರಸರಿಗೆ ಆಹ್ವಾನವಿತ್ತರು. ಅಲ್ಲಿಂದ ಶುರುವಾಯಿತು ಅವರ ನಿರಂತರ ರಂಗ ಯಾನ.

ಎತ್ತರದ ವ್ಯಕ್ತಿ ದಷ್ಟಪುಷ್ಟವಾದ ಮೈಕಟ್ಟು ಪ್ರತಿಯೊಂದು ಪಾತ್ರವನ್ನೂ ಪರಿಪೂರ್ಣವಾಗಿ ಕಲಿಯಬೇಕೆಂಬ ಆಸೆ ಸವಾಲುಗಳನ್ನು ಎದುರಿಸುವ ಛಾತಿ. ಇವೆಲ್ಲವೂ ಅರಸರನ್ನು ಅಭಿನಯ